

## ಕಂಬಳದ 'ಬೆತ್ತದ ಬೆಳ್ಳಿ ಕೋಲು'

ಕಂಬಳ ಉಡುಪಿ, ದಕ್ಷಿಣ ಕನ್ನಡ ಹಾಗೂ ಕೆಲ ಜಿಲ್ಲೆಗಳ ಭಾಗಶಃ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಹಾಗೂ ಪುರಾತನ ಕ್ರೀಡೆ. ಕಂಬಳ ನಡೆಯುವ ಪ್ರದೇಶಗಳಲ್ಲಿ ಕಂಬಳದ ಕೋಣ, ಅಂಕದ ಕೋಳಿ ಸಾಕುವುದು ಪ್ರತಿಷ್ಠೆಯ ಸಂಕೇತ ಕೂಡ. ಕಂಬಳದ ಕೋಣಗಳನ್ನು ಸಾಕಿ ಕಂಬಳ ಸಾಂಪ್ರದಾಯಿಕ ಕ್ರೀಡೆಯಲ್ಲಿ ಭಾಗವಹಿಸುವ ಕಂಬಳದ ಕೋಣಗಳ ಮಾಲೀಕ ಬಳಸುವ 'ಬೆತ್ತದ ಬೆಳ್ಳಿ ಕೋಲು' ಬೆಲೆಬಾಳುವಂತಹದ್ದು ಹಾಗೂ ಘನತೆವುಳ್ಳದ್ದು. ಕಂಬಳದ ಕೋಣಗಳ ಮಾಲೀಕ ಕಂಬಳದ ಕ್ರೀಡಾಂಗಣಕ್ಕೆ ಬರುವಾಗ ಗರಿ ಗರಿಯಾದ ಬಿಳಿ ಲುಂಗಿ, ಜುಬ್ಬಾ ಧರಿಸಿ ಹೆಗಲ ಮೇಲೊಂದು ಶಾಲು ಹೊದ್ದು, ಚರ್ ಪರ್ ಎನ್ನುವ ಚರ್ಮದ ಪಾದರಕ್ಷೆ ಮೆಟ್ಟಿ 'ಬೆತ್ತದ ಬೆಳ್ಳಿ ಕೋಲು' ಆಡಿಸುತ್ತಾ ಬರುವ ದೌಲತ್ತು ಅದ್ಭುತ.

ಅಮಾವಾಸ್ಯೆಯ ಆಜುಬಾಜು ದಿನಗಳಲ್ಲಿ ಕಾಡಿಗೆ ಹೋಗಿ ಬೆಳೆದ ಬೆತ್ತದ ನೀಟಾದ ಮೂರುವರೆಯಿಂದ ನಾಲ್ಕು ಅಡಿ ಉದ್ದದ ಬೆತ್ತದ ಬುಡದ ತುಂಡನ್ನು ತಂದು ಒಣಗಿಸಲಾಗುತ್ತದೆ. ಅದಕ್ಕೆ ಆಲಂಕಾರಿಕ ಬೆಳ್ಳಿಯ ಒಡವೆ ತೊಡಿಸಿ, ಕುಲದೇವರ ಮುಂದಿಟ್ಟು ಪೂಜೆಯನ್ನೂ ಸಲ್ಲಿಸಲಾಗುತ್ತದೆ. ನಂತರವಷ್ಟೇ ಅದು ಸಾಂಪ್ರದಾಯಿಕ ಹಾಗೂ ಧಾರ್ಮಿಕ ಬೆತ್ತದ ಬೆಳ್ಳಿ ಕೋಲು ಎಂದೆನಿಸುತ್ತದೆ. ಈ ಬೆತ್ತದ ಬೆಳ್ಳಿ ಕೋಲಿಗೆ ಕಂಬಳದ ಸಮಯ, ಹೊಸ್ತಿನ ಹಬ್ಬ ಹಾಗೂ ದೀಪಾವಳಿ ಹಬ್ಬದಂದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಮನೆಯ ಪವಿತ್ರವಾದ ಜಾಗದಲ್ಲಿ ಇದನ್ನು ಇಟ್ಟಿರುತ್ತಾರೆ. ಬದಲಾದ ಈ ಕಾಲಘಟ್ಟದಲ್ಲಿ ಈ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಬೆತ್ತದ ಬೆಳ್ಳಿಕೋಲು ಮಾಯವಾಗುತ್ತಿರುವುದು ವಿಷಾದದ ಸಂಗತಿ.

—ಬೀರಣ್ಣ ನಾಯಕ ಮೊಗಟಾ



## 'ಸತ್ಯದ ಬಾಯಿ'...

ಒಬ್ಬ ವ್ಯಕ್ತಿ ತಾನು ಹೇಳುತ್ತಿರುವುದು ಸತ್ಯ ಎಂದು ಆಣೆ ಪ್ರಮಾಣ ಮಾಡುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದನ್ನು ನಾವೆಲ್ಲರೂ ನೋಡಿರುತ್ತೇವೆ. 'ಅಸತ್ಯವನ್ನು ನುಡಿಯಬಾರದು, ಅನ್ಯಾಯ ಮಾಡಬಾರದು' ಎಂಬ ನೈತಿಕ ಮೌಲ್ಯಗಳೇ ಈ ಆಣೆಯ ಹಿಂದಿರುವ ಸಾರ. ಕೆಲವರು ದೇವರ ಸಾಕ್ಷಿಯಾಗಿ ಎಂದು ಪ್ರಮಾಣ ಮಾಡಿದರೆ, ಕೆಲವರು ತಮಗೆ ಇಷ್ಟವಾದವರ ಮೇಲೆ ಆಣೆಯಿಡುತ್ತಾರೆ. ಹೀಗೆ ಸತ್ಯವನ್ನು ಪ್ರತಿಪಾದಿಸುವ ವಿಧಾನಗಳಲ್ಲಿ ಭಿನ್ನತೆ ಇರುತ್ತದೆ.

ಪುರಾತನ ರೋಮ್ ನಗರವನ್ನು ವೀಕ್ಷಿಸಲು ಹೋಗುವ ಪ್ರವಾಸಿಗರು, ಮಧ್ಯಕಾಲೀನ 'ಸೆಂಟ್ ಮರಿಯಾ ಬೆಸಿಲಿಕಾ'ಗೆ ತಪ್ಪದೆ ಭೇಟಿ ನೀಡುತ್ತಾರೆ. ಬೆಸಿಲಿಕಾದ ಉತ್ತರ ಭಾಗದ ಆವರಣದಲ್ಲಿರುವ ಚಪ್ಪಟೆಯಾಕಾರದ ಮುಖದ ಆಕೃತಿಯನ್ನು 'ಸತ್ಯದ ಬಾಯಿ' (The mouth of truth) ಎಂದು ಕರೆಯುತ್ತಾರೆ. ಮುಖದ ಆಕೃತಿಯ ಶಿಲ್ಪವು ಕಣ್ಣು, ಮೂಗು ಹೊಂದಿದ್ದು ಕೈಯನ್ನು ತೂರಿಸಬಹುದಾದಷ್ಟು ಅಗಲವಾದ ಬಾಯಿಯಿದೆ.

ಮಧ್ಯಕಾಲೀನ ದಂತಕಥೆಯ ಪ್ರಕಾರ, ಪ್ರಮಾಣ ಮಾಡಿಸಲು ಈ ಶಿಲ್ಪವನ್ನು ಉಪಯೋಗಿಸುತ್ತಿದ್ದರಂತೆ. ಒಂದುವೇಳೆ ಪ್ರಮಾಣ ಮಾಡುವವರು ಶಿಲ್ಪದ ಬಾಯಲ್ಲಿ ಕೈ ತೂರಿಸಿ ಸುಳ್ಳು ಹೇಳಿದಲ್ಲಿ, ಶಿಲ್ಪದ ಬಾಯಿಮುಚ್ಚಿ ಕೈ ಕತ್ತರಿಸಿಹೋಗುತ್ತಿತ್ತಂತೆ. 1300 ಕಿಲೋಗ್ರಾಂ ತೂಕದ ಈ ಬೃಹತ್ ಅಮೃತಶಿಲೆಯ ಮುಖವಾಡವು ಸಮುದ್ರ ಟೈಟನ್ ದೇವರಾದ 'ಓಷಿಯಾನಸ್'ನ ಮುಖವನ್ನು ಹೋಲುತ್ತದೆ. 'ಸತ್ಯದ ಬಾಯಿ' ಶಿಲ್ಪವನ್ನು ನೋಡಲು ಪ್ರವಾಸಿಗರು ಉದ್ದ ಸಾಲಿನಲ್ಲಿ ನಿಂತು ಚಿತ್ರಗಳನ್ನು ತೆಗೆದುಕೊಳ್ಳುತ್ತಾರೆ.

—ಜಿ. ಪದ್ಮಾ, ಸಂಡೂರು

